# ರಾಮನಾಮವ ನುಡಿ ನುಡಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 501.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Prof. S.K. Ramachandra Rao and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ನಾದನಾಮಕ್ರಿಯೆ ತಾಳ: ಆದಿ

ರಾಮ ನಾಮವ ನುಡಿ ನುಡಿ
ಕಾಮ ಕ್ರೋಧಗಳ ಬಿಡಿ ಬಿಡಿ
ಶ್ರೀ ರಾಮ ನಾಮವ ನುಡಿ ನುಡಿ ‖ ಪ ‖

ಗುರುಗಳ ಚರಣವ ಹಿಡಿ ಹಿಡಿ
ಹರಿ ನಿರ್ಮಾಲ್ಯವ ಮುಡಿ ಮುಡಿ
ಕರಕರೆ ಭವ ಪಾಶವ ಕಡಿ ಕಡಿ, ಬಂದ
ದುರಿತವನೆಲ್ಲ ಹೊಡಿ ಹೊಡಿ ‖ 1 ‖

ಸಜ್ಜನ ಸಂಗವ ಮಾಡೋ ಮಾಡೋ
ದುರ್ಜನ ಸಂಗವ ಬಿಡೋ ಬಿಡೋ
ಅರ್ಜುನ ಸಾರಥಿ ರೂಪ ನೋಡೋ ನೋಡೋ, ಹರಿ
ಭಜನೆಯಲಿ ಮನವ ಇಡೋ ಇಡೋ ‖ 2 ‖

ಕರಿರಾಜ ವರದನ ಸಾರೋ ಸಾರೋ, ಶ್ರಮ
ಪರಿಹರಿಸೆಂದು ಹೋರೋ ಹೋರೋ
ವರದ ಭೀಮೇಶನ ದೂರದಿರೋ,
ನಮ್ಮ ಪುರಂದರ ವಿಠಲನ ಸೇರೋ ಸೇರೋ ‖ 3 ‖

**Classification:** Keerthane

**Ankita:** purandara vittala

**Location:** NA

**Category:** Rama Stuti, Nama Mahatme

**Sub-Category:** rama, Krishna, nirmalya, bhava, sajjana, jana, arjuna, bhajane, gaja,

**Pravachana:** NA

**Explanation:** NA